ಪ್ರಮಾಣಪತ್ರಕ್ಕೆ ಲಗತ್ತು

ದಿನಾಂಕ**: 08.04.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ನೀಡಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಆರ್ ವಿ ವಕೀಲರಿಂದಃ-

ನಾನು ಈ ದಾವೆಯನ್ನು ತಿಮ್ಮಪ್ಪ, ನಾರಾಯಣಸ್ವಾಮಿ, ಮುನಿತಿರುಮಳಪ್ಪ ಹಾಗೂ ಚನ್ನಕೇಶವ ಎನ್ನುವವರ ಮೇಲೆ ಹೂಡಿದ್ದೇನೆ. ಏನು ಪರಿಹಾರ ಕೋರಿ ಈ ದಾವೆಯನ್ನು ಹೂಡಿದ್ದೀರಿ ಎಂದರೆ ಸಾಕ್ಷಿ ದಾವಾ ಸ್ವತ್ತು ನಮಗೆ ಇನ್ನೂ ಖಾತಾ ಆಗದೇ ಇರುವುದರಿಂದ ಖಾತ ಆಗಬೇಕೆಂದು ಕೋರಿ ಹೂಡಿರುತ್ತೇನೆ. ಈ ದಾವೆಯನ್ನು ಹೂಡಲು ನಮ್ಮ ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ಏನು ಪರಿಹಾರಬೇಕೆಂದು ಸಹ ನಾನು ನನ್ನ ವಕೀಲರಿಗೆ ಹೇಳಿರುತ್ತೇನೆ. ಈ ದಾವೆಯ ವಿಚಾರಗಳನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ನನ್ನ ಪ್ರಮಾಣ ಪತ್ರದಲ್ಲಿರುವ ವಿಚಾರಗಳನ್ನು ನಾನು ಹೇಳಿ ಬರೆಸಿರುವುದಿಲ್ಲ. ದಾವಾ ಸ್ವತ್ತಿನ ಸ.ನಂ.**3/1** ಆಗಿರುತ್ತದೆ. ದಾವಾ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ಕೊಂಡಪ್ಪನವರ ಸ್ವತ್ತು, ಪಶ್ಚಿಮಕ್ಕೆ ಮುನಿಯಪ್ಪನವರ ಸ್ವತ್ತು, ಉತ್ತರಕ್ಕೆ ಸರ್ಕಾರಿ ರಸ್ತೆ, ದಕ್ಷಿಣಕ್ಕೆ ತಮ್ಮಣ್ಣನವರ ಸ್ವತ್ತು ಬರುತ್ತದೆ. ಸದರಿ ಚೆಕ್ಕುಬಂದಿಯ ಸ್ವತ್ತಿನ ವಿಸ್ತೀರ್ಣ **2** ಎಕರೆ ಒಂದೂವರೆ ಗುಂಟೆ ಇರುತ್ತದೆ. ನಾನು ನನ್ನ ವಕೀಲರಿಗೆ ಈ ದಾವೆಯನ್ನು **02** ಎಕರೆ ಒಂದೂವರೆ ಗುಂಟೆ ಜಮೀನಿಗೆ ಸಂಬಂದಪಟ್ಟಂತೆ ಹೂಡಬೇಕೆಂದು ಹೇಳಿರುತ್ತೇನೆ. ನಾನು ಸದರಿ ವಿಚಾರವನ್ನು ನನ್ನ ವಕೀಲರಿಗೆ ಹೇಳಿಲ್ಲ ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಈ ದಾವೆಯನ್ನು **02** ಎಕರೆ **02** ಗುಂಟೆಗೆ ಹೂಡಿದ್ದೇನೆಂದರೆ ಸರಿಯಲ್ಲ, ಸಾಕ್ಷಿ **02** ಎಕರೆ ಒಂದೂವರೆ ಗುಂಟೆಗೆ ಹೂಡಿದ್ದೇನೆಂದು ಹೇಳುತ್ತಾರೆ.

**2.** ಈಗ ನನ್ನ ವಯಸ್ಸು **63** ವರ್ಷ ಆಗಿರುತ್ತದೆ. ನಾನು ನನ್ನ ಪ್ರಮಾಣ ಪತ್ರದಲ್ಲಿ ನನ್ನ ವಯಸ್ಸು **55** ಎಂದು ಹೇಳಿರುತ್ತೇನೆ. ನಾನು ನನ್ನ ಪ್ರಮಾಣ ಪತ್ರದಲ್ಲಿ ಸುಳ್ಳು ಹೇಳಿದ್ದೇನೆಂದರೆ ಸರಿಯಲ್ಲ. ನಾನು ಪ್ರತಿವಾದಿಯರ ಒಂದೇ ತಂದೆಯಾದ ದೊಡ್ಡತಿರುಮಳಪ್ಪ ರವರನ್ನು ನೋಡಿದ್ದೇನೆ. ಅವರು ಯಾವಾಗ ಮರಣ ಹೊಂದಿದ್ದಾರೆಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಸದರಿ ದೊಡ್ಡ ತಿರುಮಳಪ್ಪ ಮರಣ ಹೊಂದಿ ಸುಮಾರು **50** ವರ್ಷಗಳ ಮೇಲೆ ಆಗಿರಬಹುದು. ನನಗೆ **50** ವರ್ಷಗಳಿಂದ ದೊಡ್ಡತಿರುಮಲಪ್ಪನಾಗಲೀ ಅವರ ಮಕ್ಕಳಾಗಲೀ ಹಾರಡಿ

ಗ್ರಾಮದಲ್ಲಿ ವಾಸವಾಗಿಲ್ಲ ಎಂದು ತಿಳಿದಿತ್ತು. ನಾನು ಈ ದಾವೆಯನ್ನು ಹೂಡುವಾಗ ಪ್ರತಿವಾದಿಯರು ಯಾವ ಊರಿನಲ್ಲಿ ವಾಸವಾಗಿದ್ದಾರೆಂದು ಹೇಳಿದ್ದೀರಾ ಎಂದರೆ ಸಾಕ್ಷಿ ಎಲ್ಲರೂ ಬೇರೆ ಬೇರೆ ಊರುಗಳಲ್ಲಿ ವಾಸವಾಗಿದ್ದಾರೆಂದು ಹೇಳುತ್ತಾರೆ. ನಾನು ನನ್ನ ವಕೀಲರಿಗೆ ಪ್ರತಿವಾದಿಯರು ಬೇರೆ ಬೇರೆ ಊರುಗಳಲ್ಲಿ ವಾಸ ಮಾಡುತ್ತಿದ್ದಾರೆಂದು ಹೇಳಿದ್ದೇನೆ. ಸಾಕ್ಷಿ ಬೆಂಗಳೂರಿನಲ್ಲಿ ಒಬ್ಬ ಪ್ರತಿವಾದಿ ಆಂಧ್ರದಲಿ ಒಬ್ಬ ಪ್ರತಿವಾದಿ ವಾಸವಾಗಿದ್ದಾರೆಂದು ಹೇಳಿದ್ದೇನೆ. ಹಾರಡಿಯಲ್ಲಿ ಯಾವ ಪ್ರತಿವಾದಿ ವಾಸವಾಗಿಲ್ಲ ಎಂದು ನಾನು ನನ್ನ ವಕೀಲರಿಗೆ ಹೇಳಿರುತ್ತೇನೆ. ನಾನು ಈ ದಾವೆಯನ್ನು ಹೂಡುವಾಗ ಪ್ರತಿವಾದಿಯರೆಲ್ಲಾ ಹಾರಡಿಯಲ್ಲಿ ವಾಸವಾಗಿದ್ದಾರೆಂದು ಸುಳ್ಳು ವಿಳಾಸ ತೋರಿಸಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯರೆಲ್ಲಾ ಹಾರಡಿಯಲ್ಲಿ ವಾಸಾಗಿಲ್ಲದೇ ಇದ್ದರೂ ಸಹ ಸದರಿ ವಿಳಾಸಕ್ಕೆ ನಾನು ಸುಳ್ಳು ನೋಟೀಸನ್ನು ಕಳುಹಿಸಿದ್ದೇನೆಂದರೆ ಸರಿಯಲ್ಲ. ಸದರಿ ವಿಳಾಸದಲ್ಲಿ ಪ್ರತಿವಾದಿಯರು ಯಾರು ವಾಸವಾಗಿಲ್ಲದೇ ಇರುವುದರಿಂದ ನೋಟೀಸು ಅವರಿಗೆ ಜಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ಜಾರಿಯಾದ ನೋಟೀಸು ಸಹ ಪ್ರತಿವಾದಿಯರಿಗೆ ಜಾರಿಯಾಗಿರುವುದಿಲ್ಲ ಪ್ರತಿವಾದಿಯರೇ ಸ್ವಯಂ ಹಾಜರಾಗಿ ಈ ದಾವೆಯನ್ನು ನಡೆಸುತ್ತಿದ್ದಾರೆಂದರೆ ನನಗೆ ಗೊತ್ತಿಲ್ಲ.

**3.** ಪ್ರತಿವಾದಿಯರ ತಂದೆ ನನ್ನ ತಾಯಿಗೆ ಕರಾರು ಪತ್ರವನ್ನು ಬರೆದುಕೊಟ್ಟಿದ್ದಾರೆಂದು ಹೇಳಿದ್ದು ಸದರಿ ಕರಾರು ಪತ್ರದ ಸಮಯದಲ್ಲಿ ನನ್ನ ವಯಸ್ಸು ಸುಮಾರು **7-8** ವರ್ಷ ಇರಬಹುದು. ಸದರಿ ಕರಾರು ಪತ್ರದ ವಿಚಾರ ನನಗೆ ಖುದ್ದಾಗಿ ಗೊತ್ತಿಲ್ಲ ಎಂದರೆ ಸಾಕ್ಷಿ ನನ್ನ ತಾಯಿ ನನಗೆ ಹೇಳಿದ್ದಾರೆಂದು ಹೇಳುತ್ತಾರೆ. ನನ್ನ ತಾಯಿ ನನಗೆ ಅವರು ದೊಡ್ಡತಿರುಮಲಪ್ಪ ರವರೊಂದಿಗೆ ಜಮೀನಿನ ಖರೀದಿಗೆ ಸಂಬಂದಪಟ್ಟದತೆ ಕರಾರು ಪತ್ರ ಮಾಡಿಕೊಂಡಿದ್ದು ಸದರಿ ಕರಾರು ಪತ್ರದಲ್ಲಿ ಹೇಳಿರುವಂತೆ ಈಗಾಗಲೇ ರೂ.**800/-** ಗಳನ್ನು ದೊಡ್ಡತಿರುಮಲಪ್ಪ ರವರಿಗೆ ಪಾವತಿ ಮಾಡಿದ್ದು ಉಳಿದ ರೂ.**200/-** ಗಳನ್ನು ಜಮೀನಿನ ನೋಂದಣಿ ಸಮಯದಲ್ಲಿ ನೀಡಬೇಕಾಗುತ್ತದೆಂದು ಹೇಳುತ್ತಾರೆ. ನನ್ನ ತಾಯಿ ಸದರಿ ಕರಾರು ಪತ್ರವನ್ನು **1970** ರಲ್ಲಿ ಮಾಡಿಕೊಂಡಿರುವುದಾಗಿ ಹೇಳಿರುತ್ತಾರೆ. ಸದರಿ ಕರಾರು ಪತ್ರದ ಪ್ರತಿ ನನ್ನ ವಕೀಲರ ಬಳಿ ಇರುತ್ತದೆ. ಸದರಿ ಕರಾರು ಪತ್ರದ ದಿನಾಂಕ ನನಗೆ ಗೊತ್ತಿಲ್ಲ. ಕರಾರು ಪತ್ರದ ಸಮಯದಲ್ಲಿ ಬೇರೆ ಯಾವುದೇ ಪತ್ರ ವ್ಯವಹಾರ ಆಗಿದೆಯೇ ಎಂದರೆ ಸಾಕ್ಷಿ ಕರಾರು ಪತ್ರ ಮಾತ್ರ ಆಗಿರುತ್ತದೆಂದು ಹೇಳುತ್ತಾರೆ . ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ನಿ.ಪಿ.**1** ಕರಾರು ಪತ್ರದ ದಾಖಲೆ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ಸದರಿ ಕರಾರು ಪತ್ರ ಎಷ್ಟು ವಿಸ್ತೀರ್ಣದ ಜಮೀನಿಗೆ ಸಂಬಂದಪಟ್ಟಂತೆ ಆಗಿರುತ್ತದೆಂದರೆ ಸಾಕ್ಷಿ ಸ.ನಂ.**3/1** ರಲ್ಲಿ **3** ಎಕರೆ **02** ಗುಂಟೆಗೆ ಸಂಬಂದಪಟ್ಟಂತೆ ಆಗಿರುತ್ತದೆಂದು ಹೇಳುತ್ತಾರೆ. ಕರಾರು ಪತ್ರದ ಸಮಯದಲ್ಲಿ ಸದರಿ ದಾಖಲೆಯನ್ನು ನೋಂದಣಿ ಮಾಡಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ ನನ್ನ ತಾಯಿಗೆ ತಿಳಿದಿರುತ್ತದೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಾನು ಹೇಳುವ ಹಾಗೆ **1970** ರಲ್ಲಿ ಪ್ರತಿವಾದಿಯರ ತಂದೆ ಯಾವುದೇ ಕರಾರು ಪತ್ರವನ್ನು ನನ್ನ ತಾಯಿಗೆ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ . ನಾನು ಕರಾರು ಪತ್ರವನ್ನು **03** ಎಕರೆ **02** ಗುಂಟೆಗೆ ಮಾಡಿಕೊಟ್ಟಿದ್ದಾರೆಂದು ಹೇಳಿದ್ದು ಆದರೆ ಈ ದಾವೆಯನ್ನು **02** ಎಕರೆ ಒಂದೂವರೆ ಗುಂಟೆಗೆ ಸಂಬಂದಪಟ್ಟಂತೆ ಏಕೆ ಹೂಡಲಾಗಿದೆ ಎಂದರೆ ಸಾಕ್ಷಿ ಪ್ರತಿವಾದಿಯರು **01** ಎಕರೆ ಅರ್ಧ ಗುಂಟೆ ಜಮೀನನ್ನು ಬೇರೆಯವರಿಗೆ ಮಾರಾಟ ಮಾಡಿದ್ದಾರೆಂದು ಹೇಳುತ್ತಾರೆ. ಕರಾರು ಪತ್ರವನ್ನು ಮಾಡಿಕೊಂಡಾಗ ಸದರಿ ಜಮೀನಿನ ಸ್ವಾಧೀನವನ್ನು ಸಹ ನಮಗೆ ನೀಡಲಾಗಿದ್ದು ನಾವೇ ಸ್ವಾಧೀನದಲ್ಲಿ ಇರುತ್ತೇವೆ. ಪ್ರತಿವಾದಿಯರು **1974** ರಲ್ಲಿ **01** ಎಕರೆ ಅರ್ಧ ಗುಂಟೆ ಜಮೀನನ್ನು ಬೇರೆಯವರಿಗೆ ಮಾರಾಟ ಮಾಡಿರುತ್ತಾರೆ. ಸದರಿ ಮಾರಾಟ ಮಾಡಿದ ವಿಚಾರವನ್ನು ನನ್ನ ತಾಯಿ **10** ವರ್ಷಗಳ ನಂತರ ನನಗೆ ಹೇಳಿರುತ್ತಾರೆ. ನಾನು ನನ್ನ ವಕೀಲರಿಗೆ ಉಳಿಕೆ ಜಮೀನನ್ನು ಮಾರಾಟ ಮಾಡಿದ ಸಂಬಂದ ನಾವು ಪ್ರತಿವಾದಿಯರನ್ನು ಕೇಳಿದ್ದೇವೆಂದು ಹೇಳಿರುವುದಿಲ್ಲ. ಉಳಿಕೆ ಜಮೀನನ್ನು ಏಕೆ ಮಾರಾಟ ಮಾಡಿದ್ದೀರಾ ಎಂದು ನನ್ನ ತಾಯಿ ಪ್ರತಿವಾದಿಯರನ್ನು ಕೇಳಿರಬಹುದು. ಯಾವಾಗ ಕೇಳಿರುತ್ತಾರೆಂದು ನನಗೆ ಗೊತ್ತಿಲ್ಲ.

**(ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಹಾಜರಿದ್ದು ಕಾಲಾವಕಾಶ ಕೋರಿದ್ದು ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.)**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಇದೆ.
ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.